ಆ) ಇಲ್ಲ

ಇ) ಹೌದು, ಸರ್ಕಾರವು ದಿ:10.12.2003 ರಿಂದ ಜಾರಿಗೆ ಬರುವಂತೆ ಬೆಟ್ಟಿಂಗ್ (ಲಾಟರಿ) ತೆರಿಗೆಯನ್ನು ವಿಧಿಸಲು ಸುಗ್ರಿವಾಜ್ಞೆಯನ್ನು ಹೊರಡಿಸಿದೆ. ಇದರಿಂದ ಕರ್ನಾಟಕ ರಾಜ್ಯದಲ್ಲಿ ಮಾರಾಟವಾಗುವ ಯಾವುದೇ ಲಾಟರಿಯ ಪ್ರತಿ ಬಂಪರ್ ಡ್ರಾಗಳಿಗೆ ರೂ. 1.5 ಲಕ್ಷ ಹಾಗೂ ಬೇರೆ ಡ್ರಾಗಳ ಮೇಲೆ ರೂ. 1 ಲಕ್ಷ ತೆರಿಗೆಯನ್ನು ವಿಧಿಸಿದೆ.

ಈ) ಕರ್ನಾಟಕ ರಾಜ್ಯದ ಸಾಂಪ್ರದಾಯಿಕ ಲಾಟರಿಗಳನ್ನು ಮೆ: ಎಂ.ಎಸ್.ಐ.ಎಲ್ ಸಂಸ್ಥೆ ಮೂಲಕ ಹಾಗೂ ಕಂಪ್ಯೂಟರೈಸ್ಡ್ ನೆಟ್‌ವರ್ಕ್ ಲಾಟರಿಯನ್ನು ಮೆ: ಆಲ್ಟಾ ಎಂಟರ್‌ಟೈಮೆಂಟ್ ಸಲ್ಯೂಷನ್ ಸಂಸ್ಥೆ ಪರವಾಗಿ ನಡೆಸಲಾಗುತ್ತದೆ.

ರಾಜ್ಯದಲ್ಲಿ ಸೆಕೆಂಡ್ಸ್ ಮದ್ಯ ವ್ಯವಹಾರದ ಪ್ರಕರಣಗಳ ಬಗ್ಗೆ

36 (12) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮದ್ಯದ ಸೆಕೆಂಡ್ಸ್ ವ್ಯವಹಾರ ಇದೆಯೇ;

ಆ) ಇದ್ದಲ್ಲಿ, ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ;

ಇ) ಇಲ್ಲವಾದಲ್ಲಿ, ಪಾನೀಯ ನಿಗಮದ ಮುಖೇನ ಸರಬರಾಜು ಮಾಡದಿರುವ ಮದ್ಯಗಳೆಲ್ಲವೂ ನಕಲಿ ಮದ್ಯ ಅಲ್ಲವೇ;

ಅಂತಹ ಮದ್ಯ ಯಾವುದೇ ಬಾರ್ ಅಥವಾ ಅಂಗಡಿಗಳಲ್ಲಿ ಮಾರಾಟ ಮಾಡಿದ್ದಲ್ಲಿ ಆ ಅಂಗಡಿ ಅಥವಾ ಬಾರ್‌ನ ಪರವಾನಿಗೆಯನ್ನು ರದ್ದು ಮಾಡಲಾಗುವುದೇ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಹೌದು

ಆ) ಒಟ್ಟು 1918 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. 297140 ಬಲ್ಕ್ ಲೀಟರ್‌ಗಳ ತೆರಿಗೆ ರಹಿತ ಮತ್ತು ನಕಲಿ ಮದ್ಯವನ್ನು ಜಪ್ತು ಮಾಡಲಾಗಿದೆ ಮತ್ತು 3655 ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದೆ.

ಇ) ಹೌದು

ಈ ಬಗ್ಗೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಮದ್ಯದಂಗಡಿ ಮತ್ತು ಬಾರ್ ನಡೆಸಲು ಇರಬೇಕಾದ ಮಾರ್ಗಸೂಚಿಗಳ ಬಗ್ಗೆ

37 (13) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮದ್ಯದಂಗಡಿಗಳು ಹಾಗೂ ಬಾರ್‌ಗಳ ಸಂಖ್ಯೆ ಎಷ್ಟು;

ಆ) ಇವುಗಳಿಗೆ ಪರವಾನಿಗೆಯನ್ನು ನೀಡಲು ಬಳಸುವ ಮಾರ್ಗಸೂಚಿಗಳೇನು;

ಇ) ಪ್ರತಿ ಮದ್ಯದಂಗಡಿ ಅಥವಾ ಬಾರ್ ನಡುವೆ ಇರಬೇಕಾದ ಅಂತರವೆಷ್ಟು;

ಈ) ಎಷ್ಟು ಪ್ರಕರಣಗಳಲ್ಲಿ ಅಂತರ ನಿಯಮ ಉಲ್ಲಂಘಿಸಿ ಪರವಾನಿಗೆಯನ್ನು ನೀಡಲಾಗಿದೆ; ಅಥವಾ ಇಲಾಖೆಯ ಗಮನಕ್ಕೆ ಬಾರದೇ ಇವುಗಳನ್ನು ನಡೆಸಲಾಗುತ್ತಿದೆಯೇ; ಜಿಲ್ಲಾವಾರು ಕ್ಷೇತ್ರವಾರು ಪರವಾನಿಗೆದಾರರ ವಿವರ ನೀಡುವುದು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ 2003–04ನೇ ಸಾಲಿನಲ್ಲಿ 3670 ಚಿಲ್ಲರೆ ಮದ್ಯದ ಅಂಗಡಿಗಳು (ಸಿಎಲ್–2) ಮತ್ತು 3381 ಬಾರ್ ಮತ್ತು ರೆಸ್ಟೋರೆಂಟ್‌ಗಳು (ಸಿಎಲ್–9) ನವೀಕೃತ ಸನ್ನದುಗಳಿವೆ.

ಆ) ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968 ರ ನಿಯಮ 4ರ ಅನ್ವಯ ಅರ್ಜಿದಾರರು ನಿಗದಿತ ನಮೂನೆಯಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಸನ್ನದು ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಬೇಕಗಿರುತ್ತದೆ. ಇಂತಹ ಅರ್ಜಿಗಳನ್ನು ಪರಿಶೀಲಿಸಿ ಕೋಟಾದನ್ವಯ ಅರ್ಜಿದಾರರ ಜೇಷ್ಠತೆ ಆಧಾರದ ಮೇಲೆ ಸನ್ನದನ್ನು ನೀಡಲಾಗುವುದು ಉದ್ದೇಶಿತ ಸನ್ನದು ಮಳಿಗೆಯು ಕರ್ನಾಟಕ ಅಬಕಾರಿ ಸನ್ನದು (ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ 5 ರ ಅನ್ವಯ ಆಕ್ಷೇಪಣಾ ರಹಿತ ಸ್ಥಳವಾಗಿರಬೇಕಾದ ನಿರ್ಭಂಧವಿರುತ್ತದೆ.

ಇ) ಅಂತರದ ಬಗ್ಗೆ ನಿರ್ಭಂದವಿರುವುದಿಲ್ಲ.

ಈ) ಮೇಲಿನ ಪ್ರಶ್ನೆ (ಇ) ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ರೈತರ ವಿದ್ಯುತ್ ಸಮಸ್ಯೆಯ ಪರಿಹಾರದ ಬಗ್ಗೆ

88 (14) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳ ನಂತರ ಹಾಲಿ ವರ್ಷದಲ್ಲಿ ಆಗಿರುವ ಅಲ್ಪಮಳೆಯಿಂದ ಕೃಷಿಗಾಗಿ ರೈತರ ಪಂಪ್ ಸೆಟ್‌ಗಳಿಗೆ ವಿದ್ಯುತ್ ಪೂರೈಸಲಾಗುತ್ತಿದೆಯೇ;

ಆ) ವಿದ್ಯುತ್ ಕೊರತೆ ಇದ್ದಲ್ಲಿ, ಸರ್ಕಾರ ಕಂಡುಕೊಂಡ ಪರ್ಯಾಯ ವ್ಯವಸ್ಥೆ ಯೇನು;

ಇ) ಮೀನುಗಾರರ ದೋಣಿಗಳಿಗೆ ರಿಯಾಯಿತಿ ದರದಲ್ಲಿ ಇಂಧನ ನೀಡುತ್ತಿರುವ ರೀತಿಯಲ್ಲೇ ರೈತರಿಗೂ ಸಹ ರಿಯಾಯಿತಿ ದರದಲ್ಲಿ ಇಂಧನ ನೀಡುವ ಉದ್ದೇಶ ಸರ್ಕಾರಕ್ಕಿದೆಯೇ: ಈ ಕುರಿತು ಸರ್ಕಾರದ ನಿಲುವು ಏನು:

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹಾಲಿ ವರ್ಷದಲ್ಲಿ ಅಲ್ಪ ಮಳೆಯಾಗಿದ್ದರೂ ಸಹ ರೈತರ ಪಂಪ್ ಸೆಟ್‌ಗಳಿಗೆ ಸಾಧ್ಯವಾದಷ್ಟೂ ವಿದ್ಯುತ್ ಪೂರೈಸಲಾಗುತ್ತಿದೆ.

ಆ) ಪ್ರಸ್ತುತ ರಾಜ್ಯದಲ್ಲಿ ಸುಮಾರು 3000 ಮಿ.ಯೂ. ಗಳಷ್ಟು ವಿದ್ಯುತ್‌ನ ಕೊರತೆ ಇದೆ. ಆದರೂ ವಿದ್ಯುತ್ ಪೂರೈಕೆಯಲ್ಲಿ ಅಡಚಣೆಯಾಗದಂತೆ ನೋಡಿಕೊಳ್ಳಲು, ಅಲ್ಪಾವಧಿ ಕ್ರಮವಾಗಿ ಪವರ್ ಟ್ರೇಡಿಂಗ್ ಕಾರ್ಪೋರೇಷನ್ ನಿಂದ ಹಾಗೂ ಎನ್.ಟಿ.ಪಿ.ಸಿ. ರಾಷ್ಟ್ರೀಯ ವಿದ್ಯುತ್ ವ್ಯಾಪಾರ ನಿಗಮದಿಂದ ವಿದ್ಯುತ್‌ನ್ನು ಖರೀದಿಸಿ ವಿದ್ಯುತ್ ಸರಬರಾಜಿನಲ್ಲಿ ಸುಧಾರಣೆಗೊಳಿಸುವ ಪರ್ಯಾಯ ಕ್ರಮವನ್ನು ಸರ್ಕಾರ ತೆಗೆದುಕೊಂಡಿರುತ್ತದೆ.

ಇ) ಅಂತಹ ಪ್ರಸ್ತಾವನೆ ಇರುವುದಿಲ್ಲ.

ರಾಜ್ಯದಲ್ಲಿ ಗ್ರಾಮೀಣಾ ಕೃಪಾಂಕ ನೌಕರರ ಮರು ನೇಮಕಾತಿಯ ಬಗ್ಗೆ

40 (69) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?